**ಅಸಲು ದಾವಾ ಸಂಖ್ಯೆ.231/2017** **ದಿನಾಂಕ:28-8-2024**

**ಪಿ.ಡಬ್ಲ್ಯೂ:1**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**ಮುಂದುವರೆದ ಪಾಟೀ ಸವಾಲು : 2 ಮತ್ತು 3 ನೇ ಪ್ರತಿವಾದಿಯ ಪರ ಶ್ರೀ ಆರ್ ಕೆ ವಕೀಲರಿಂದ**

20. ಈ ದಾವೆಯಲ್ಲಿ ನಾನು ನನ್ನ ಪರ ಯಾವ ಯಾವ ದಾಖಲೆಗಳನ್ನು ಹಾಗೂ 2 ಮತ್ತು 3 ನೇ ಪ್ರತಿವಾದಿ ಯಾವ ಯಾವ ದಾಖಲೆಗಳನ್ನು ಹಾಜರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ನನ್ನ ವಕೀಲರಿಗೆ ಗೊತ್ತಿರುತ್ತದೆ. ದಾವೆ ದಾಖಲಿಸುವ ಮೊದಲು ವಕೀಲರಿಗೆ ನಾನೇ ದಾಖಲೆಗಳನ್ನು ನೀಡಿರುತ್ತೇನೆ. ನೀಡಿದ ದಾಖಲೆಗಳನ್ನು ನಾನೇ ವಿವರಿಸಿ ನೀಡಿರುತ್ತೇನೆ. ನಾನು 2 ನೇ ಪ್ರತಿವಾದಿ ಹೆಸರಿನಲ್ಲಿದ್ದ ಪಹಣಿ ನಂತರ 3 ನೇ ಪ್ರತಿವಾದಿ ಹೆಸರಿಗೆ ದಾಖಲಾದ ಪಹಣಿ ಪತ್ರಿಕೆಗಳನ್ನು ಹಾಗೂ ಇತರೆ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ಇತರೆ ದಾಖಲೆಗಳು ಯಾವುವು ಎಂದು ನನಗೆ ನೆನಪಿಲ್ಲ.

**-26-**

21. ನಿಪಿ-8 ರಿಂದ 10 ರಂತೆ ದಾಖಲಿಸಿರುವ ವಿಭಾಗ ಪತ್ರಗಳನ್ನು ನಾನು ಈ ದಾವೆಗೋಸ್ಕರ ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-8 ರಿಂದ 10 ರ ವಿಭಾಗಪತ್ರಗಳು ನನ್ನ ಮತ್ತು 1 ನೇ ಪ್ರತಿವಾದಿ ನಡುವೆ ಆದಂತಹ ದಾಖಲೆಗಳು. 2008 ರಲ್ಲಿ ಭಾಗ ಆಗಿದ್ದು ನಿಖರ ದಿನಾಂಕ ತಿಂಗಳು ಗೊತ್ತಿಲ್ಲ. ನಿಪಿ-8 ರಿಂದ 10 ರ ದಾಖಲೆಗಳನ್ನು ಬೆಳಗ್ಗೆ 10-11 ಗಂಟೆ ಸಮಯದಲ್ಲಿ ಮಾಡಲಾಗಿತ್ತು. ನಿಪಿ-8 ರಿಂದ 10 ರ ದಾಖಲೆ ಬರೆಯಲು ನಾನು ಮತ್ತು 1 ನೇ ಪ್ರತಿವಾದಿ ನಮ್ಮ ಹೆಸರಿನಲ್ಲಿರುವ ತಲಾ ಒಂದೊಂದು ಬಾಂಡ್ ಪೇಪರ್ ಗಳನ್ನು ತಂದಿದ್ದೆವು. ಸದರಿ 2 ಬಾಂಡ್ ಪೇಪರ್ ಗಳನ್ನು ಒಂದೇ ದಿನಾಂಕದಂದು ಖರೀದಿ ಮಾಡಲಾಗಿತ್ತು. ನಿಪಿ-8 ರ ಬಾಂಡ್ ಪೇಪರ್ ನನ್ನ ಹೆಸರಿನಲ್ಲಿ ಇರುತ್ತದೆ. ನಿಪಿ-9 ರ ಬಾಂಡ್ ಪೆಪರ್ ಸಹ ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ನಿಪಿ-8 ಮತ್ತು 9 ರ ಬಾಂಡ್ ಪೇಪರ್ ಗಳನ್ನು ಒಂದೇ ದಿನ ಖರೀದಿ ಮಾಡಿದ್ದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ-8 ರ

ಬಾಂಡ್ ಪೇಪರ್ ಮೇಲೆ ದಿನಾಂಕ 10-12-2008 ಎಂದುನಮೂದು ಮಾಡಲಾಗಿದೆ. ಅದೇ ರೀತಿ ನಿಪಿ-9ರ ಬಾಂಡ್ ಪೇಪರ್ ಮೇಲೆ ದಿನಾಂಕ 21-11-2008ಎಂದು ನಮೂದು ಮಾಡಲಾಗಿದೆ. ನಿಪಿ-8 ಮತ್ತು 9ರ ಬಾಂಡ್ ಪೇಪರ್ ಮೇಲೆ 1ನೇ ಪ್ರತಿವಾದಿ ಹೆಸರು ಇಲ್ಲದಿದ್ದರೂ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

22. ಬ್ಯಾಂಕಿಗೆ ಯಾರು ಹೋಗಿ ಬಾಂಡ್ ಪೇಪರ್ ಖರೀದಿ ಮಾಡುತ್ತಾರೋ ಅವರಿಗೆ ಬಾಂಡ್ ಪೇಪರ್ ನೀಡುತ್ತಾರೆ ಎಂದರೆ ಸರಿ. ಸಾಕ್ಷಿಯು 1ನೇ ಪ್ರತಿವಾದಿ ನನಗೆ ತರಲು ಹೇಳಿದ್ದರು ಎಂದು ಸ್ವತಃ ನುಡಿಯುತ್ತಾರೆ. 1ನೇ ಪ್ರತಿವಾದಿ ನನಗೆ ಬಾಂಡ್ ಪೇಪರ್ ತರಲು ಹೇಳಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. 1ನೇ ಪ್ರತಿವಾದಿ ಬಾಂಡ್ ಪೇಪರ್ ಗಳನ್ನು ತರಲು ಹೇಳಿರದಿದ್ದರೂ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8ರ ವಿವಾದಿತ ವಿಭಾಗ ಪತ್ರದಲ್ಲಿ ಬರೆದಿರುವ ಆಸ್ತಿಗಳ ಪೈಕಿ



ಯಾವುವು ಒಟ್ಟು ಕುಟುಂಬದ ಆಸ್ತಿಗಳು, ಯಾವುವು ನನ್ನ ಪಿತ್ರಾರ್ಜಿತ ಆಸ್ತಿಗಳು, ಯಾವುವು ತಾಯಿ ತವರು ಮನೆ ಆಸ್ತಿಗಳು ಮತ್ತು ಯಾವುವು 2ನೇ ಪ್ರತಿವಾದಿಯ ಅಕ್ಕಮನೆ ಆಸ್ತಿಗಳು ಎಂದು ನನಗೆ ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ. ಯಾವ ಆಸ್ತಿಗಳು ಯಾವ ರೀತಿ ಬಂದಿರುತ್ತವೆ ಎಂದು ನಿಪಿ-8 ಮತ್ತು 9 ರಲ್ಲಿ ವಿವರವಾಗಿ ಬರೆದಿರುವುದಿಲ್ಲ.

23. ನಿಪಿ-8ಮತ್ತು 9 ರ ವಿಭಾಗ ಪತ್ರವನ್ನು 1ನೇ ಪ್ರತಿವಾದಿ ಮನೆಯಲ್ಲಿ ಬರೆದಿರುತ್ತೇವೆ. ಆ ಸಮಯದಲ್ಲಿ ನನ್ನ ಜೊತೆ ಗೌಡರ ಕಲ್ಲಪ್ಪ ವತ್ತು ಭೈರಪ್ಪ ಎಂಬುವವರು ಹಾಜರಿದ್ದರು. ಗ್ರಾಮಸ್ಥರಾದ ಹನುಮಂತಪ್ಪ, ರಾಜಪ್ಪ, ಈಶ್ವರಪ್ಪ, ಕರಿಯಪ್ಪ, ರಂಗಪ್ಪ ಮತ್ತು ಇತರರು ಹಾಜರಿದ್ದರು. ಕಲ್ಲಪ್ಪ ನನ್ನ ತಂದೆಯ ಅಜ್ಜ ತಮ್ಮ. ಭೈರಪ್ಪ ನನ್ನ ಅಜ್ಜ ಅಣ್ಣನ ಮಗನ ಮಗ. ರಾಜಪ್ಪನ ತಂದೆ ಹೆಸರು ಕರಿದ್ಯಾಮಪ್ಪ. ಕರಿ ದ್ಯಾಮಪ್ಪ ನನ್ನ ಅಜ್ಜನ ಅಣ್ಣ ತಮ್ಮಂದಿರು

ಎಂದರೆ ಸರಿಯಲ್ಲ. ಹನುಮಂತಪ್ಪ ನನ್ನ ಅಣ್ಣ ತಮ್ಮನ ಸಂಬಂಧ ಆಗಬೇಕು. ರಂಗಪ್ಪ ಗ್ರಾಮಸ್ಥರಾಗಿದ್ದು ನನ್ನ ಸಂಬಂಧಿಕರಲ್ಲ. ಈಶ್ವರಪ್ಪ ರಾಜಪ್ಪನ ಅಣ್ಣ. ಕರಿಯಪ್ಪ ಈಗ ಮೃತರಾಗಿದ್ದು ಊರಿನ ಯಜಮಾನರಾಗಿದ್ದರು. ಪಂಚಾಯತಿಯು ಸುಮಾರು 2-3 ಗಂಟೆ ಆಗಿತ್ತು. ನಿಪಿ-8 ಮತ್ತು 9ರ ಬಾಂಡ್ ಪೇಪರ್ ಗಳನ್ನು ಎಲ್ಲಿ ಟೈಪ್ ಮಾಡಲಾಗಿತ್ತು ಎಂದು ನೆನಪಿಲ್ಲ. ಯಾರ ಬಳಿ ಟೈಪ್ ಮಾಡಿಸಲಾಗಿತ್ತು ಎಂದು ನೆನಪಿಲ್ಲ.

24. ನಿಪಿ-8 ಮತ್ತು 9ಕ್ಕೆ 1ನೇ ಪ್ರತಿವಾದಿ ಹೇಳಿ ಬರೆಸಿರುತ್ತಾರೆ. ಎಷ್ಟು ಕಾಲ ಬೆರಳಚ್ಚು ಮಾಡಲಾಯಿತು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಹೇಳಿ ಬರೆಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ಮತ್ತು 9ರ ದಾಖಲೆಗಳನ್ನು ಪಂಚಾಯತಿ ಆದ ಎಷ್ಟು ದಿನಗಳ ನಂತರ ಬೆರಳಚ್ಚು ಮಾಡಿಸಲಾಗಿತ್ತು ಎಂದು ನನಗೆ ನೆನಪಿಲ್ಲ. ನಿಪಿ-8 ಮತ್ತು 9 ರಲ್ಲಿ ಆಸ್ತಿ ವಿಭಾಗ ಆದ ಬಗ್ಗೆ ಒಕ್ಕಣೆ ಇರುತ್ತದೆ. ನಮ್ಮ ತಾಯಿಯ ತವರು ಮನೆ



ಆಸ್ತಿ ಸರ್ವೆ ನಂ.15/5 2 ಎಕರೆ 27 ಗುಂಟೆ. ಈ ಆಸ್ತಿ ಹೊರತುಪಡಿಸಿ ನನ್ನ ತಾಯಿಗೆ ಬೇರೆ ಆಸ್ತಿ ಇರುವುದಿಲ್ಲ. ಸರ್ವೆ ನಂ.140/5 ನಿಡಿ-5ರಲ್ಲಿ ಬರೆದಿರುವ ಆಸ್ತಿಗಳು ನನ್ನ ತಾಯಿ ತವರು ಮನೆ ಆಸ್ತಿ ಎಂದರೆ ಸರಿ. ನನ್ನ ತಾಯಿ ತವರು ಮನೆ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲು ನನಗಾಗಲೀ ಅಥವಾ 1ನೇ ಪ್ರತಿವಾದಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಅಜ್ಜಿಯ ಆಸ್ತಿಗಳನ್ನು ಸೇರಿಸಿ ವಿಭಾಗ ಮಾಡಿಕೊಳ್ಳಲು ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

25. ಕಪ್ಪಗೆರೆ ಗ್ರಾಮದ ಸರ್ವೆ ನಂ.13 4 ಎಕರೆ 26 ಗುಂಟೆ ಮತ್ತು ಸರ್ವೆ ನಂ.15/1 2 ಎಕರೆ 13 ಗುಂಟೆ ಜಮೀನು 1972-73ರಲ್ಲಿ ನನ್ನ ಅಜ್ಜಿ ಹನುಮವ್ವ ಖರೀದಿಗೆ ಪಡೆದ ಆಸ್ತಿಗಳಾಗಿದ್ದು ಅವುಗಳಲ್ಲಿ ಭಾಗ ಮಾಡಿಕೊಳ್ಳಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಯ ಮಾವ ಹೊಳಿಯಪ್ಪ ದಿನಾಂಕ 6-5-1980 ರಂದು ರಂದು 2 ನೇ ಪ್ರತಿವಾದಿಗೆ 195/1980-81 ನೇ ದಾಖಲೆ ಮೂಲಕ ನೊಂದಾಯಿತ ದಾನಪತ್ರದ ಮೂಲಕ ನೀಡಿದ ಆಸ್ತಿಯಾಗಿದ್ದು ಅದರಲ್ಲಿಯೂ ಸಹ ವಿಭಾಗ ಮಾಡಿಕೊಳ್ಳಲು ನನಗೆ ಮತ್ತು 1 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. **ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾನಪತ್ರವನ್ನು ನಿಡಿ-3 ಎಂದು ಗುರುತಿಸಲಾಯಿತು.**

26. ನಿಪಿ-8 ಮತ್ತು 9 ರ ಖಾಲಿ ಬಾಂಡ್ ಪೇಪರ್ ಗಳಿಗೆ ಈಶ್ವರಪ್ಪನವರ ಸಹಿಗಳನ್ನು ಪಡೆದು ಅದನ್ನು ವಿಭಾಗಪತ್ರ ಎಂದು ನಂತರ ಬೆರಳಚ್ಚು ಮಾಡಿಸಿ ನಾನೇ ಸೃಷ್ಠಿಮಾಡಿರುತ್ತೇನೆ ಎಂದರೆ ಸುಳ್ಳು. 2 ನೇ ಪ್ರತಿವಾದಿಗೆ ಸ್ತ್ರೀಧನದ ಮೂಲಕ ಬಂದಂತಹ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ-8 ರಲ್ಲಿ ನಮೂದು ಮಾಡಿಕೊಂಡು ಅದನ್ನು ವಿಭಾಗ ಆಗಿದೆ ಎಂದು ಸುಳ್ಳು



ಸೃಷ್ಠಿಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಹಿಂದಿನ ದಾವೆಯಲ್ಲಿ ಈ ದಾವಾ ಆಸ್ತಿಯು 2 ನೇ ಪ್ರತಿವಾದಿಗೆ ಆಕೆಯ ಮಾವ ನಿಡಿ-3 ರಂತೆ ದಾನಪತ್ರದ ಮೂಲಕ ನೀಡಿದ್ದರು ಎಂಬ ವಿಷಯವನ್ನು ನ್ಯಾಯಾಲಯಕ್ಕೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಓ ಎಸ್ ನಂ90/2016 ರಲ್ಲಿ ನಾನು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿ 2 ನೇ ಪ್ರತಿವಾದಿಗೆ ಆಕೆಯ ಮಾವ ದಾನಪತ್ರದ ಮೂಲಕ ನೀಡಿದ್ದರು ಎಂಬ ವಿಷಯ ತಿಳಿಸಿರುವುದಿಲ್ಲ.

27. ನಾನಾಗಲೀ, ನನ್ನ ತಂದೆ, ಅಜ್ಜ ಅಥವಾ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೆವು ಎಂದು ತೋರಿಸಲು ಯಾವುದೇ ದಾಖಲೆಯ್ನು ಹಾಜರು ಮಾಡಿರುವುದಿಲ್ಲ. ನಿಪಿ-8 ರ ವಿಭಾಗ ಪತ್ರಕ್ಕೆ ರಾಜಪ್ಪ, ಹನುಮಂತಪ್ಪ, ಭೈರಪ್ಪ, ಕರಿಯಪ್ಪ ಮತ್ತು ಈಶ್ವರಪ್ಪನವರು ಸಾಕ್ಷಿದಾರರಾಗಿ

ಸಹಿ ಮಾಡಿರುತ್ತಾರೆ. ನಿಪಿ-8 ಕ್ಕೆ ನಾನು, ಈಶ್ವರಪ್ಪ ಮತ್ತು ಹನುಮವ್ವ ಸಹಿ ಮಾಡಿರುತ್ತೇವೆ. ಆಗ ಹನುಮವ್ವನಿಗೆ ಸುಮಾರು 65-70 ವರ್ಷ ವಯಸ್ಸಾಗಿತ್ತು. ಆಗ ನನಗೆ ಸುಮಾರು 46 ವರ್ಷ ವಯಸ್ಸಾಗಿತ್ತು. ಹನುಮವ್ವನಿಗೆ ಆಗ 80 ವರ್ಷಕ್ಕಿಂತಲೂ ಹೆಚ್ಚಿಗೆ ವಯಸ್ಸಾಗಿತ್ತು ಎಂದರೆ ಸರಿ. ನಾನು ಈಗ ಹೇಳಿದಂತೆ ಯಾವುದೇ ಸಾಕ್ಷಿದಾರರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ಹನಮವ್ವನ ಮತ್ತು 2 ನೇ ಪ್ರತಿವಾದಿಯ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ಇರುವುದಿಲ್ಲ. ನಿಪಿ-8 ರಲ್ಲಿ ಹನುಮವ್ವನನ್ನು ಪಕ್ಷಗಾರರಾಗಿ ಸೇರ್ಪಡೆ ಮಾಡಿರುವುದಿಲ್ಲ. 2 ನೇ ಪ್ರತಿವಾದಿಯ ಗಂಡ ಈಶ್ವರಪ್ಪ ಅಂದರೆ 1 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿದ್ದೇನೆ. 2 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ನಿಪಿ-8 ರಲ್ಲಿ ಸೇರಿಸಿರುವುದಿಲ್ಲ. ನಾನು 2 ನೇ ಪ್ರತಿವಾದಿಗೆ ನಿಜಾಂಶ ಮರೆಮಾಚಿ ನಿಪಿ-8 ಮತ್ತು 9 ರ ದಾಖಲೆಗಳನ್ನು ಸೃಷ್ಟಿಮಾಡಿರುತ್ತೇನೆ ಎಂದರೆ ಸುಳ್ಳು.



28. ಓಸ್ ನಂ.90/2016 ರ ದಾವೆಯಲ್ಲಿ ನಾನು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಈ ದಾವೆಯ 2 ನೇ ಪ್ರತಿವಾದಿಯು ಸಹ ಅವಶ್ಯಕ ಪಕ್ಷಗಾರಾಗಿದ್ದರು ಎಂದು ತಿಳಿಸಿರುವುದಿಲ್ಲ. ನಿಪಿ-10 ರ ವಿಲೇವಾರಿ ದಾಖಲೆಯನ್ನು ಆಸ್ತಿಗಳು ಯಾರು ಯಾರಿಗೆ ಸೇರಬೇಕು ಎಂದು 1 ನೇ ಪ್ರತಿವಾದಿ ಕರಡು ಸಿದ್ದಪಡಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರ ಕರಡಿನಲ್ಲಿ ಇದ್ದಂತೆ ನಿಪಿ-8 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ನನಗೆ ಒಟ್ಟು 9 ಐಟಂ ಆಸ್ತಿಗಳು ಎಂದು ತೋರಿಸಿದೆ ಎಂದರೆ ಸರಿ. ನಿಪಿ-8 ರಲ್ಲಿ ನನ್ನ ಪಾಲಿಗೆ 13 ಸ್ವತ್ತುಗಳು ಎಂದು ಬರೆಸಲಾಗಿದೆ ಎಂದರೆ ಸರಿ. ನಿಪಿ-10 ರಲ್ಲಿ 1 ನೇ ಪ್ರತಿವಾದಿಗೆ ಒಟ್ಟು 12 ಐಟಂ ಆಸ್ತಿಗಳು ಎಂದು ತೋರಿಸಿದೆ ಎಂದರೆ ಸರಿ. ನಿಪಿ-8 ರಲ್ಲಿ 1 ನೇ ಪ್ರತಿವಾದಿಗೆ ಪಾಲಿಗೆ 11 ಸ್ವತ್ತುಗಳು ಎಂದು ಬರೆಸಲಾಗಿದೆ ಎಂದರೆ ಸರಿ. ನಿಪಿ-10 ರಲ್ಲಿ ನನ್ನ ಮತ್ತು 1 ನೇ ಪ್ರತಿವಾದಿಗೆ

ಬಂದವು ಎಂದು ಹೇಳಿದ ಸ್ವತ್ತುಗಳ ಸರ್ವೆ ನಂಬರ್ ವಿಸ್ತೀರ್ಣ ಮತ್ತು ಅವುಗಳ ಗ್ರಾಮದ ಹೆಸರು ಹಾಗೂ ಚಕ್ಕುಬಂದಿಗಳನ್ನು ಬರೆಸಿರುವುದಿಲ್ಲ.

29. ನಿಪಿ-10 ನ್ನು ಯಾರು ಬರೆದಿರುತ್ತಾರೆ ಎಂದು ಷರಾ ಬರೆದಿರುವುದಿಲ್ಲ ಎಂದರೆ ಸರಿ. ನಿಪಿ-10 ನ್ನು 1 ನೇ ಪ್ರತಿವಾದಿ ಖುದ್ದಾಗಿ ಬರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ಮೇಲೆ ದಿನಾಂಕವನ್ನು 11-9-2008 ಎಂದು ನಾನು ಬರೆದು ಸೃಷ್ಠಿಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನಾಂಕ ನಮೂದು ಮಾಡಿರುವ ಬರವಣಿಗೆಗೂ ಮತ್ತು ಎಡಭಾಗದಲ್ಲಿ ಕ್ರಮ ಸಂಖ್ಯೆ ಬರದಿರುವ ಅಂಕೆಗಳ ಬರವಣಿಗೆಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ 2 ನೇ ಪ್ರತಿವಾದಿ ಮತ್ತು ಹನುಮವ್ವರವರ ಸಹಿ ಇರುವುದಿಲ್ಲ. ನಿಪಿ-10 ರಲ್ಲಿ ಪಕ್ಷಗಾರರು ಯಾರು ಯಾರು ಹಾಗೂ ಸಾಕ್ಷಿದಾರರು ಯಾರು ಯಾರು ಎಂದು ನಿರ್ಧಿಷ್ಟವಾಗಿ ಬರೆದಿರುವುದಿಲ್ಲ. ನಿಪಿ-10 ರಲ್ಲಿ ಎಲ್ಲಾ ಸಹಿಗಳನ್ನು ನಾನು ಸೃಷ್ಠಿ



ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಹಿ ಮಾಡಿದವರ ತಂದೆಯ ಹೆಸರು ಮತ್ತು ವಿಳಾಸ ಬರೆದಿರುವುದಿಲ್ಲ.

**ವಕೀಲರು ಮುಂದು ವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.

(ಪ್ರಸನ್ನ ಕುಮಾರ್ ಸಿ)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**